ಸೆಲೆಬ್ರಿಟಿ

■ ಹನಿ


## ‘ಹಾಟ್’ ಸುಂದರಿ ರೋಸೀ



**ಮ್ಯಾ**ಕ್ಸಿಂ ಎಂಬ ‘ಪುರುಷರ ಮ್ಯಾಗಸಿನ್’ ಪ್ರತಿವರ್ಷವೂ ಜಗತ್ತಿನ ‘ಅತ್ಯಂತ ಹಾಟ್ ಸುಂದರಿ’ಯರ ಪಟ್ಟಿಯೊಂದನ್ನು ಪ್ರಕಟಿಸುತ್ತದೆ. ನೂರು ಮಂದಿ ಸುಂದರಿಯರ ಪಟ್ಟಿಯಲ್ಲಿ ಸ್ಥಾನ ಗಳಿಸಲು ವಿಶ್ವಾದ್ಯಂತ ಮಾಡೆಲ್‌ಗಳು ಮತ್ತು ಸಿನಿಮಾ ನಟಿಯರ ಮಧ್ಯೆ ಭಾರೀ ಪೈಪೋಟಿ ನಡೆಯುತ್ತದೆ. ಈಗ 2011ರ ‘ಹಾಟ್ ಸುಂದರಿಯರ ಪಟ್ಟಿ’ ಪ್ರಕಟವಾಗಿದೆ. ಪಟ್ಟಿಯಲ್ಲಿ ಎಲ್ಲರೂ ಆಶ್ಚರ್ಯ ಪಡುವಂತೆ ಬ್ರಿಟನ್ನಿನ ಮಾಡೆಲ್, ನಟಿ ರೋಸೀ ಹಂಟಿಂಗ್ಟನ್ ವೈಟ್‌ಲೀ ಮೊದಲ ಸ್ಥಾನ ಗಳಿಸಿದ್ದಾಳೆ.

ಆಶ್ಚರ್ಯ ಏಕೆಂದರೆ, ಒಲಿವಿಯಾ ಮನ್‌ಳಂತಹ ಪ್ರಭಾವಶಾಲಿ ಸುಂದರಿಯನ್ನೂ ರೋಸೀ ಹಿಂದಿಕ್ಕಿದ್ದಾಳೆ. ವಿಶ್ವಖ್ಯಾತಿಯ ಸುಂದರಿಯರಾದ ಮೇಘನಾ ಫಾಕ್ಸ್ ಈ ಪಟ್ಟಿಯಲ್ಲಿ 17ನೆ ಸ್ಥಾನ ಪಡೆದಿದ್ದರೆ, ಬ್ರಿಟ್ನಿ ಸ್ಪಿಯರ್ಸ್ 25ನೆ ಸ್ಥಾನಕ್ಕೆ ಜಾರಿದ್ದಾಳೆ. ಕಳೆದ ವರ್ಷದ ಟಾಪರ್, ಕೇಟಿ ಪೆರ್ರಿಯೇ ಈ ಸಲ 3ನೆ ಸ್ಥಾನಕ್ಕೆ ಇಳಿದಿದ್ದಾಳೆ. ಪಟ್ಟಿ ಪ್ರಕಟವಾದ ದಿನ ಸ್ವತಃ ಅಚ್ಚರಿಗೊಂಡ ರೋಸೀ, ‘ಮತ್ತೊಮ್ಮೆ ವಿಚಾರಿಸಿ ನೋಡಿ– ಎಲ್ಲೋ ತಪ್ಪಾಗಿರಬೇಕು’ ಎಂದಳಂತೆ!

24ರ ಹರೆಯದ ರೋಸೀ (ಬರ್ತ್‌ಡೇ 18–4–87)ಗೆ ಈ ವರ್ಷ ನಿಜಕ್ಕೂ ಖುಷಿ ಕೊಡುವ ವರ್ಷವೇ. ಆಕೆ ನಾಯಕಿಯಾಗಿ ನಟಿಸಿರುವ ಮೊದಲ ಚಿತ್ರ ‘ಟ್ರಾನ್ಸ್‌ಫಾರ್ಮರ್ಸ್: ಡಾರ್ಕ್ ಆಫ್ ದಿ ಮೂನ್’ ಜುಲೈನಲ್ಲಿ ಬಿಡುಗಡೆಯಾಗಲಿದೆ. ಈ ಚಿತ್ರಕ್ಕೂ ಮೇಘನಾ ಫಾಕ್ಸ್‌ಳನ್ನು ಆಯ್ಕೆ ಮಾಡಿದ್ದ ನಿರ್ಮಾಪಕರು ಕೊನೆಗೆ ಆಕೆಯನ್ನು ಕೈಬಿಟ್ಟು ರೋಸೀಯನ್ನು ಆಯ್ಕೆ ಮಾಡಿದ್ದರು. 2008ರವರೆಗೆ ಫ್ಯಾಶನ್ ಲೋಕದಲ್ಲಿ ಅಜ್ಞಾತಳಾಗಿದ್ದ ರೋಸೀ, 2009ರಿಂದ ಪ್ರತಿಷ್ಠಿತ ‘ವಿಕ್ಟೋರಿಯಾಸ್ ಸೀಕ್ರೆಟ್’ ಒಳಉಡುಪುಗಳ ಮಾಡೆಲ್ ಆಗಿದ್ದಾಳೆ. ಗಾಡಿವಾ, ಮಿಸ್ ಸಿಕ್ಸ್‌ಟೀ ಮುಂತಾದ ಬ್ರಾಂಡ್‌ಗಳಿಗೂ ಈಕೆಯೇ ರಾಯಭಾರಿ. ಸದ್ಯಕ್ಕೆ ನಟ, ಸಮರಕಲೆ ತಜ್ಞ ಜೇಸನ್ ಸ್ಟಾಥಮ್ ಜತೆ ವಾಸಿಸುತ್ತಿದ್ದಾಳೆ. ಅದೂ ಈಕೆಯ ಮೂರನೆಯ ಸಂಬಂಧ. ಹೊಸ ಹಾಲಿವುಡ್ ಚಿತ್ರಗಳಿಗೂ ಈಕೆಯ ಹೆಸರು ಪ್ರಸ್ತಾಪವಾಗಿದೆ.



## ಶೇನ್ ವಾರ್ನ್ ವಿದಾಯ

ಶೇನ್ ವಾರ್ನ್ ಎಂಬ ಸ್ಪಿನ್ ಮಾಂತ್ರಿಕ ಐಪಿಎಲ್ ಕ್ರಿಕೆಟ್‌ಗೂ ವಿದಾಯ ಹೇಳುತ್ತಿರುವುದಾಗಿ ಪ್ರಕಟಿಸಿ, ಅಭಿಮಾನಿಗಳ ಮೇಲೆ ಹೊಸ ‘ಬಾಂಬ್’ ಹಾಕಿದ್ದಾರೆ. ‘ಇದು ನನ್ನ ಕೊನೆಯ ಐಪಿಎಲ್ ಸರಣಿ’ ಎಂದು ಟ್ವೀಟ್ ಮಾಡಿರುವ ವಾರ್ನ್, ‘ಮಕ್ಕಳ ಜತೆ ಸಮಯ ಕಳೆಯಬೇಕಿದೆ. ನನ್ನ ಪ್ರತಿಷ್ಠಾನದ ಕೆಲಸಗಳೂ ಬಾಕಿ ಇವೆ’ ಎಂದು ಊರಲ್ಲಿ ಸೆಟ್ಲ್ ಆಗುವ ಕಾತುರ ವ್ಯಕ್ತಪಡಿಸಿದ್ದಾರೆ. ರಾಜಸ್ತಾನ ರಾಯಲ್ಸ್ ತಂಡದ ಕೋಚ್ ಮತ್ತು ನಾಯಕ ಎರಡೂ ಆಗಿರುವ ವಾರ್ನ್, ಮೊದಲ ಐಪಿಎಲ್ ಟ್ರೋಫಿಯನ್ನು ತಂಡಕ್ಕೆ ಗೆದ್ದು ಕೊಟ್ಟ ಚಾಣಾಕ್ಷ.

ಜಗತ್ತು ಕಂಡ ಮಾಂತ್ರಿಕ ಸ್ಪಿನ್ನರ್‌ಗಳ ಪಟ್ಟಿಯಲ್ಲಿ ಶೇನ್ ವಾರ್ನ್ ಮುಂಚೂಣಿಯಲ್ಲಿ ನಿಲ್ಲುತ್ತಾರೆ. ಕರ್ನಾಟಕದ ಬಿ.ಎಸ್.ಚಂದ್ರಶೇಖರ್, ಶ್ರೀಲಂಕಾದ ಮುತ್ತಯ್ಯ ಮುರಳೀಧರ್ ಮತ್ತು ಪಾಕಿಸ್ತಾನದ ಅಬ್ದುಲ್ ಖಾದಿರ್‌ರಂತಹ ಸಾರ್ವಕಾಲಿಕ ಸರ್ವಶ್ರೇಷ್ಠರ ಪಟ್ಟಿಯಲ್ಲಿ ವಾರ್ನ್ ಹೆಸರನ್ನೂ ಸೇರಿಸಬಹುದು. ಆಸ್ಟ್ರೇಲಿಯಾದ ವಿಕ್ಟೋರಿಯಾದ ಈ ಲೆಗ್‌ಸ್ಪಿನ್ನರ್ ಅಂತರರಾಷ್ಟ್ರೀಯ ಕ್ರಿಕೆಟ್‌ನಲ್ಲಿ ಸಾವಿರಕ್ಕೂ ಹೆಚ್ಚು ವಿಕೆಟ್ ತೆಗೆದುಕೊಂಡು ದಾಖಲೆ ಪಟ್ಟಿಯಲ್ಲಿ ಮುರಳಿ ನಂತರದ ಸ್ಥಾನ ಪಡೆದಾತ. ಈತ ಬರೆದಿದ್ದ ಅತ್ಯಧಿಕ ಟೆಸ್ಟ್ ವಿಕೆಟ್‌ಗಳ (708 ವಿಕೆಟ್) ದಾಖಲೆಯನ್ನು ಇತ್ತೀಚೆಗೆ ಮುರಳಿ ಮುರಿದು ಹಾಕಿದ್ದರು.

23 ವರ್ಷಗಳಿಂದ ಜಾಗತಿಕ ಕ್ರಿಕೆಟ್‌ನಲ್ಲಿರುವ ವಾರ್ನ್ (ಬರ್ತ್‌ಡೇ 13–9–1969) ಉತ್ತಮ ಪೋಕರ್ ಆಟಗಾರ ಮತ್ತು ಕಾಮೆಂಟರಿ ತಜ್ಞ ಕೂಡಾ. ವೃತ್ತಿಜೀವನದುದ್ದಕ್ಕೂ ವಿವಾದಗಳ ಸವಾರಿ ಮಾಡಿದ ವಾರ್ನ್ ‘ರಸಿಕರ ರಾಜ’ನೂ ಹೌದು! ಸುಂದರಿಯರಿಗೆ ಎಸ್‌ಎಮ್ಮೆಸ್ ಕಳಿಸಿ ಹೆಂಡತಿಯ ಕೈಗೆ ಪದೇ ಪದೇ ಸಿಕ್ಕುಬಿದ್ದು ಅಧ್ವಾನ ಮಾಡಿಕೊಂಡದ್ದು ವಾರ್ನ್ ಸಾಧನೆಗಳಲ್ಲಿ ಒಂದು. ಸಿಟ್ಟಿಗೆದ್ದ ಹೆಂಡತಿ ಎರಡು ಬಾರಿ ವಿಚ್ಛೇದನ ನೀಡಿದ್ದೂ ದೊಡ್ಡ ಸುದ್ದಿಯೇ. ಬ್ರಿಟನ್ನಿನ ನಟಿ ಲಿಜ್ ಹರ್ಲೀ ಜತೆಗೂ ಗುಪ್ತ ಸಂಬಂಧ ಇಟ್ಟುಕೊಂಡಿದ್ದು ಇತ್ತೀಚೆಗೆ ಬಯಲಾಗಿತ್ತು. ಮಾದಕ ದ್ರವ್ಯ ಸೇವಿಸಿ ಡೋಪಿಂಗ್ ಟೆಸ್ಟ್‌ನಲ್ಲಿ ಸಿಕ್ಕುಬಿದ್ದು, ಕ್ರಿಕೆಟ್‌ನಿಂದ ನಿಷೇಧಕ್ಕೆ ಒಳಗಾದದ್ದು, ಬುಕ್ಕಿಗಳಿಂದ ದುಡ್ಡು ಪಡೆದು ಮ್ಯಾಚ್ ಫಿಕ್ಸ್ ಮಾಡಿದ್ದು– ಹೀಗೆ ವಾರ್ನ್ ಹಗರಣಗಳ ಪಟ್ಟಿಯೂ ದೊಡ್ಡದಿದೆ. ಇದೆಲ್ಲದರ ಮಧ್ಯೆಯೂ ಈತ ಎಸೆಯುವ ಗೂಗ್ಲೀಗಳು ಸಾವಿರಾರು ಅಭಿಮಾನಿಗಳನ್ನು ಬೌಲ್ಡ್ ಮಾಡಿರುವುದು ಸುಳ್ಳಲ್ಲ.

Printed and Published by S.V. Srinivasan on behalf of The Printers (Mysore) Private Ltd. Printed at Rajhans Enterprises, No.134, 4th Main Road, Industrial Town, Rajajinagar, Bangalore- 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@deccanherald.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65